# ಏಕಾಗ್ರತೆಯಿಂದ ಆನಂದದಿಂದ ಚೆನ್ನಾಗಿ ಅಧ್ಯಯನ ಮಾಡಿ

## ಜ್ಞಾಪಕಶಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ ?

ಜಿ. ಮನೋರಮಾ

ಕಂಪ್ಯೂಟರ್ ಸಾಮರ್ಥ್ಯವನ್ನು ಅದರ RAM ಸಾಮರ್ಥ್ಯದ ಅಂದರೆ ಮೆಗಾ ಬೈಟ್ಸ್, ಗಿಗಾ ಬೈಟ್ಸ್ ಮೂಲಕ ಅಳೆಯಬಹುದು. ಈ ಮಾಪನದಲ್ಲಿ ಮಾನವನ ಮಿದುಳಿನ ಸಾಮರ್ಥ್ಯ ೨,೦೦೦ ದಿಂದ ೮,೦೦೦ ಮೆಗಾ ಬೈಟ್ಸ್ ಎಂದು ತಿಳಿದುಬಂದಿದೆ (*New India Express*, ೧೨-೧೨-೨೦೦೧).

ಮನುಷ್ಯನ ಮಿದುಳಿನಲ್ಲಿ ೨೦ ಬಿಲಿಯನ್‌ಗೂ ಹೆಚ್ಚು ನರಕೋಶಗಳಿದ್ದರೂ ಅದರ ಶಕ್ತಿ, ಸಾಮರ್ಥ್ಯಗಳನ್ನು ಬಳಸದಿರುವುದು ಬಹಳ ದುಃಖದ ವಿಚಾರ. ಇದುವರೆಗೆ ಇರುವ ಮಾಹಿತಿಯ ಪ್ರಕಾರ, ಅತಿ ಹೆಚ್ಚಿನ ಮೆದುಳಿನ ಬಳಕೆ ಮಾಡಿಕೊಂಡಿರುವ ವ್ಯಕ್ತಿ ಎಂದರೆ ಐನ್‌ಸ್ಟೈನ್ – ೧೧%. ಸಾಮಾನ್ಯ ಜನರು ೬-೮% ಮಿದುಳನ್ನು ಬಳಸುವರೆಂದು ತಿಳಿದುಬಂದಿದೆ.

**ಜ್ಞಾಪಕ ಶಕ್ತಿ ಅಥವಾ ನೆನಪಿನ ಶಕ್ತಿ:** ಇಂದಿನ ಪರೀಕ್ಷೆಗಳು ವಿದ್ಯಾರ್ಥಿಗಳ ಬುದ್ಧಿಸೂಕ್ಷ್ಮತೆಯ ಬದಲು, ಅವರ ಸ್ಮರಣ ಶಕ್ತಿ ಅಥವಾ ನೆನಪಿನ ಶಕ್ತಿಯನ್ನೇ ಪರೀಕ್ಷಿಸುತ್ತವೆ. ಸಂಗ್ರಹಿಸಿಟ್ಟ ಮಾಹಿತಿಯನ್ನು ಅಗತ್ಯಬಿದ್ದಾಗ ಹೊರಗೆಳೆಯಬಲ್ಲ ಶಕ್ತಿಯೇ ನೆನಪಿನ ಶಕ್ತಿ (Retrieval). ಜ್ಞಾಪಕಶಕ್ತಿ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಲ್ಲ. ಪ್ರತಿಯೊಬ್ಬರ ದಿನನಿತ್ಯದ ಜೀವನದಲ್ಲಿ ಅವರವರ ಆವಶ್ಯಕತೆಗೆ ಅನುಸಾರವಾಗಿ ಜ್ಞಾಪಕಶಕ್ತಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಈ ಶಕ್ತಿಗೆ ಪರಿಮಿತಿಯೇ ಇಲ್ಲ.

ಜೀವನದಲ್ಲಿ ಏನೇ ಅನುಭವ ಪಡೆದಿದ್ದರೂ, ನಂತರದ ಅನುಭವಗಳಿಗಿಂತ, ಮೊದಲ ಬಾರಿಗೆ ಪಡೆದ ಅನುಭವ ಶಾಶ್ವತವಾಗಿ ನೆನಪಿನಲ್ಲಿರುತ್ತದೆ. ಒಂದು ಸಂಗತಿಯನ್ನು ಸ್ಪಷ್ಟವಾಗಿ ನೆನಪಿನಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದಾಗ ಮಾತ್ರ ಅದು ನೆನಪಿನಲ್ಲಿರುತ್ತದೆ, ಇಲ್ಲವಾದರೆ ಅಳಿಸಿಹೋಗುತ್ತದೆ. ಈ ಕಾರಣದಿಂದಲೇ 'ಮನನ' ಬಹಳ ಮುಖ್ಯ.

ನೆನಪಿನ ಶಕ್ತಿ ಒಂದು ಕಲೆ. ಅಭ್ಯಾಸ ಮಾಡಿದಂತೆಲ್ಲ, ತರಬೇತಿ ನೀಡಿದಂತೆಲ್ಲ ಅದು ತೀಕ್ಷ್ಣಗೊಳ್ಳುತ್ತಲೇ ಹೋಗುತ್ತದೆ. ವ್ಯವಸ್ಥಿತ ರೀತಿಯಲ್ಲಿ, ಸೃಜನಾತ್ಮಕವಾಗಿ, ಹೊಸ ಹೊಸ ರೀತಿಗಳಲ್ಲಿ ಅಧ್ಯಯನ ಮಾಡುವುದರಿಂದ, ನಮಗೆ ಒಗ್ಗಿದ ರೀತಿಯಲ್ಲಿ ಆ ಶಕ್ತಿಯನ್ನು ಬಳಸಿಕೊಂಡು ಅಭ್ಯಾಸ ಮಾಡುವುದರಿಂದ, ನಮ್ಮ ನೆನಪಿನ ಶಕ್ತಿಯನ್ನು ನಾವು ಚೆನ್ನಾಗಿ ವೃದ್ಧಿಸಿಕೊಳ್ಳಬಹುದು.

**ನೆನಪಿನ ಪ್ರಕ್ರಿಯೆ ಮೂರು ಹಂತಗಳಲ್ಲಿ ನಡೆಯುತ್ತದೆ:** ೧. **ಗ್ರಹಣ (Registration)**: ಕಣ್ಣು, ಕಿವಿಗಳ ಮೂಲಕ ಮಾಹಿತಿ ಮಿದುಳನ್ನು ಸೇರುತ್ತದೆ. ಅಲ್ಲಿ ಮಾಹಿತಿ ನಮಗೆ ಅರ್ಥವಾಗುತ್ತದೆ. ೨. **ಮುದ್ರಣ (Recording)** : ನರಕೋಶಕಗಳಲ್ಲೇ ಉತ್ಪತ್ತಿಯಾಗುವ "ಅಸಿಟೈಲ್ ಕೋಲಿನ್" ಎಂಬ ನರವಾಹಕ ವಸ್ತುವಿನ ಸಹಾಯದಿಂದ ಆ ಮಾಹಿತಿ ಮಿದುಳಿನ ನರಕೋಶಗಳಲ್ಲಿ ಮುದ್ರಣವಾಗುತ್ತದೆ. **೩. ಸ್ಮರಣೆ (Recall)**: ಮುದ್ರಿತ ಮಾಹಿತಿಯನ್ನು ನಾವು ನಮಗೆ ಬೇಕಾದಾಗ ನೆನಪಿಸಿಕೊಳ್ಳಬಹುದು.

**ನೆನಪಿನ ಶಕ್ತಿಗೆ ನೇರವಾಗಿ ಸಂಬಂಧಿಸಿರುವ ಅಂಶಗಳು:** ೧. ಅಭಿರುಚಿ, ಆಸಕ್ತಿ; ೨. ವಿಷಯ ಕುರಿತು ಉತ್ಸುಕತೆ; ೩. ವಿಷಯದ ಆವಶ್ಯಕತೆ; ೪. ದೈಹಿಕ–ಮಾನಸಿಕ ಸ್ಥಿತಿ; ೫. ಗ್ರಹಿಸುವಿಕೆ; ೬. ಕಲಿಕೆಯ ಪರಿಪೂರ್ಣತೆ; ೭. ಪರಿಶ್ರಮ; ೮. ಗುರಿಯ ಸಾಧನೆ / ಛಲ; ೯. ಅಧ್ಯಯನ ವಿಧಾನ; ೧೦. ಏಕಾಗ್ರತೆ ; ೧೧. ವಿಷಯದ ಸ್ಪಷ್ಟತೆ.

**ನೆನಪಿನ ರೀತಿಗಳು:**

೧. **ತಾತ್ಕಾಲಿಕ ನೆನಪು ಅಥವಾ ಅಲ್ಪಾವಧಿ ನೆನಪು (Short term memory *or* Temporary memory)**

೨. **ದೀರ್ಘಾವಧಿ ನೆನಪು(Long term memory)**

೩. **ಶಾಶ್ವತ ನೆನಪು (Permanent memory)**

ಈ ಜ್ಞಾಪಕಶಕ್ತಿ ಅಥವಾ ನೆನಪಿನ ಶಕ್ತಿಯನ್ನು ಕ್ರಮೇಣ ಅಭಿವೃದ್ಧಿಗೊಳಿಸಿಕೊಳ್ಳಬೇಕೇ ಹೊರತು, ರಾತ್ರೋರಾತ್ರಿ ಇದು ಹೆಚ್ಚುವುದಿಲ್ಲ; ಹಾಗೆಯೇ ಯಾವುದೇ ಔಷಧೋಪಚಾರ / ಶಸ್ತ್ರಕ್ರಿಯೆಗಳ ಮೂಲಕ ಪಡೆಯುವಂತಹುದಲ್ಲ.

ಜ್ಞಾಪಕಶಕ್ತಿ ಅವರವರ ಮಿದುಳಿನ ನಿರ್ಮಾಣ ಹಾಗೂ ಅದರ ಕಾರ್ಯಕ್ಷಮತೆಯನ್ನು ಅವಲಂಬಿಸಿದೆಯಾದರೂ, ಅನುವಂಶೀಯವೆಂದೂ ಕೆಲವರು ಹೇಳುತ್ತಾರೆ. ನೆನಪಿನ ಶಕ್ತಿ ತೀಕ್ಷ್ಣವಿರುವವರ IQ (Intelligent Quotient) ಹೆಚ್ಚಿರುತ್ತದೆ. IQ ಹೆಚ್ಚಿದ್ದ ಮಾತ್ರಕ್ಕೆ ವಿದ್ಯಾಭ್ಯಾಸದಲ್ಲೂ ಜಾಣರಾಗಬೇಕೆಂದೇನಿಲ್ಲ. ಅಭಿರುಚಿ–ಆಸಕ್ತಿ ಇದ್ದಲ್ಲಿ, IQ ಮಟ್ಟವನ್ನು ಪ್ರಯತ್ನ ಅಭ್ಯಾಸಗಳಿಂದ ಉತ್ತಮಗೊಳಿಸಿಕೊಳ್ಳಬಹುದು.

**ಯಾವ್ಯಾವ ಅಂಶಗಳಿಂದ ಜ್ಞಾಪಕಶಕ್ತಿ ವೃದ್ಧಿಸಿಕೊಳ್ಳಲು ಸಾಧ್ಯ?**

೧. ವಿಷಯದ ಕುರಿತು ಆಸಕ್ತಿ ೨. ಕಲಿಕೆಯಲ್ಲಿನ ಶ್ರದ್ಧೆ, ೩. ಜ್ಞಾಪಕ ಶಕ್ತಿಯನ್ನು ವೃದ್ಧಿಸಿಕೊಳ್ಳಬೇಕೆಂಬ ಹಂಬಲ ೪. ನೆನಪಿನಲ್ಲಿಡಲೇಬೇಕೆನ್ನುವ ಪ್ರೇರಣೆ, ೫.ನಿಮ್ಮ ಶ್ರಮದ ಮೇಲೆ ನಿಮಗಿರುವ ಆತ್ಮವಿಶ್ವಾಸ ೬. ಸಾಧಿಸಲೇಬೇಕೆಂಬ ಛಲ, ದೃಢ ನಿರ್ಧಾರ ೭. ಜಾಗರೂಕತೆ ಮತ್ತು ಪರಿಶೀಲನಾ ಶಕ್ತಿಯ ಬಳಕೆ ೮. ಸತತ, ನಿರಂತರ ಪ್ರಯತ್ನ ೯. ಇಚ್ಛಾಶಕ್ತಿ ೧೦. ಏಕಾಗ್ರತೆ. (***ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಿಗೆ ಲೇಖಕಿ ಕಾರ್ಯಾಗಾರಗಳನ್ನು ನಡೆಸುತ್ತಾರೆ. ವಿವರಗಳಿಗೆ ಅವರನ್ನು ಈ ಫೋನ್ ನಂಬರಿನಲ್ಲಿ ಸಂಪರ್ಕಿಸಬಹುದು*** – **98444-24727** )

# ಗುರು ಗೋವಿಂದಸಿಂಗ್

**ಕಥೆ:** ಆರ್.ವಿ. **ಚಿತ್ರ:** ಪದ್ಮವಾಸನ್

**1** ಸಿಖ್ ಮತದ ಒಂಬತ್ತನೇ ಗುರು ತೇಜಬಹಾದುರ್. ಮಗ ಗೋವಿಂದ ಒಂಬತ್ತು ವರ್ಷದವನಾದಾಗ ತೇಜ ಬಹಾದೂರರು ತಮ್ಮ ಕತ್ತಿಯನ್ನು ಅವನ ಕೈಗೆ ಕೊಟ್ಟು ಹೀಗೆ ಹೇಳಿದರು:

ಮಗು, ಔರಂಗಜೇಬನು ನನ್ನನ್ನು ಕೊಲ್ಲುವನು, ಇದು ನಿಶ್ಚಿತ. ಆದುದರಿಂದ ಸಿಖ್ ಮತವನ್ನು ರಕ್ಷಿಸುವ ಜವಾಬ್ದಾರಿ ನಿನ್ನ ಮೇಲಿದೆ. ದೇವರು ನಿನಗೆ ಸಹಾಯಕನಾಗಿರುವನು.




ಅಪ್ಪಾ, ಈ ಕತ್ತಿಯೇ ನನ್ನ ದೇವರು.
ನಾನು ನಿಮ್ಮ ಮಾತನ್ನು ಖಂಡಿತ ನಡೆಸುವೆನು.

**2** ಸ್ವಲ್ಪ ಕಾಲದಲ್ಲೇ ಔರಂಗಜೇಬನು ತೇಜಬಹಾದುರರನ್ನು ಸೆರೆಹಿಡಿದನು. ತೇಜಬಹಾದುರರು ಇಸ್ಲಾಂ ಮತವನ್ನು ಸೇರಲಿಲ್ಲ. ಆದಕಾರಣ ಅವರ ತಲೆ ಕತ್ತರಿಸಿ, ಅವರ ಶರೀರವನ್ನು ಕೋಟೆಯ ಬಾಗಿಲಿಗೆ ನೇತುಹಾಕಿಸಿದನು.




ಗೋವಿಂದ ತನ್ನ ತಂದೆಯ ಶರೀರವನ್ನು ಪಡೆದುಕೊಂಡು ಅಂತ್ಯಸಂಸ್ಕಾರಗಳನ್ನು ಮಾಡಿದ.

**3** ಸಿಖ್ ಮತದ ರಕ್ಷಣೆಗಾಗಿ ನನ್ನ ತಂದೆ ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟರು. ನಾನೂ ಅವರ ಮಾರ್ಗವನ್ನೇ ಅನುಸರಿಸುತ್ತೇನೆ. ಸಿಖ್ ಮತವನ್ನು ಸಂರಕ್ಷಿಸಲು ನಿರಂತರ ಹೋರಾಡುತ್ತೇನೆ.



**4** ಗೋವಿಂದ ಪೌರುಷ ಪರಾಕ್ರಮಗಳನ್ನು ಚೆನ್ನಾಗಿ ಬೆಳೆಸಿಕೊಂಡ. ೧೮ ನೇ ವಯಸ್ಸಿನಲ್ಲಿ ಸುಂದರಿ ಎಂಬ ಕನ್ಯೆಯೊಡನೆ ಈತನ ವಿವಾಹವಾಯಿತು. ನಾಲ್ಕು ವರ್ಷಗಳ ನಂತರ ಈತನಿಗೆ ಅಜಿತನೆಂಬ ಮಗ ಹುಟ್ಟಿದ.

ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಯಲ್ಲಿರುವ ಆಧ್ಯಾತ್ಮಿಕ ಸಾಹಿತ್ಯವನ್ನು ನಮ್ಮ ಮಾತೃಭಾಷೆಗೆ ಭಾಷಾಂತರ ಮಾಡಬೇಕು. ಅದಕ್ಕಾಗಿ ಪಂಡಿತರೆ! ನೀವು ಕಾಶಿಗೆ ಹೋಗಿ ಶಿಕ್ಷಣ ಪಡೆದು ಬನ್ನಿ.



**5** ನೈನಿ ಎಂಬ ಗ್ರಾಮದಲ್ಲಿ ಪಂಡಿತರು ಗುರುವಿನೊಡನೆ ದುರ್ಗಾಪೂಜೆ ನೆರವೇರಿಸಿದರು.

ಸಿಖ್ಖರು ಯುದ್ಧಕಲೆಯಲ್ಲಿ ನಿಪುಣರಾಗಬೇಕು. ಅವರು ಪರಾಕ್ರಮಿಗಳಾಗಬೇಕು. ಅದಕ್ಕಾಗಿ ನಾವು ದುರ್ಗಾಪೂಜೆಯನ್ನು ಮಾಡುತ್ತಿದ್ದೇವೆ.



ಈ ಪೂಜೆ ತುಂಬಾ ಮುಖ್ಯ. ಏಕೆಂದರೆ ಪರಾಕ್ರಮಿಗಳನ್ನು ಮಾತ್ರವೇ ಪ್ರಪಂಚ ಗೌರವಿಸುತ್ತದೆ.

**6** ಈ ದುರ್ಗಾಪೂಜೆ ನಾಲ್ಕು ತಿಂಗಳ ಕಾಲ ನಡೆಯಿತು. ಅಲ್ಲಿ ಸಿಖ್ಖರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಪೂಜೆಯ ಕೊನೆಯಲ್ಲಿ ಗುರು ಗೋವಿಂದರು ಹೊರಗೆ ಬಂದರು. ಅಲ್ಲಿ ನೆರೆದಿದ್ದ ಜನರಿಗೆ ರಕ್ತ ಸುರಿಯುತ್ತಿದ್ದ ತಮ್ಮ ಕೈಯನ್ನು ತೋರಿಸಿದರು.

ದುರ್ಗಾದೇವಿಗೆ ನಾನು ನನ್ನ ಬೆರಳೊಂದನ್ನು ನಿವೇದನೆ ಮಾಡಿದ್ದೇನೆ. ರಾಷ್ಟ್ರದ ರಕ್ಷಣೆಗೆ ಜೀವದಾನ ಮಾಡುವ ಅಗತ್ಯ ಇದೆ. ನಿಮ್ಮಲ್ಲಿ ಯಾರು ರಾಷ್ಟ್ರರಕ್ಷಣೆಗೆ ಜೀವ ಕೊಡಲು ಸಿದ್ಧರಿದ್ದೀರಿ?





**7** ಈ ತರಹ ಗುರು ಇನ್ನೂ ನಾಲ್ಕು ಬಾರಿ ಘೋಷಣೆ ಮಾಡಿದರು. ಅದಕ್ಕೆ ಉತ್ತರವಾಗಿ ಇನ್ನೂ ನಾಲ್ಕು ಜನ ತಮ್ಮ ಜೀವವನ್ನು ಕೊಡಲು ಸಿದ್ಧರಿದ್ದೇವೆ ಎಂದು ಮುಂದೆ ಬಂದರು; ಗುರುವಿಗೆ ತಮ್ಮನ್ನೇ ಅರ್ಪಿಸಿಕೊಂಡರು.

ಮೊಟ್ಟಮೊದಲು ಎಲ್ಲವನ್ನೂ ತ್ಯಾಗಮಾಡಲು ಸಿದ್ಧನಾಗಿ ಮುಂದೆ ಬಂದ ಲಾಹೋರಿನ ದಯಾರಾಮ ಎಂಬುವವನನ್ನು ಗುರು ತಮ್ಮ ಅಂತರಂಗ ಶಿಷ್ಯನನ್ನಾಗಿ ಆರಿಸಿಕೊಂಡರು. ಇದೇ ರೀತಿ ಐದು ಜನ ತ್ಯಾಗಿಗಳನ್ನು ಗುರು ಆರಿಸಿಕೊಂಡರು. ಈ ಗುಂಪನ್ನು 'ಖಾಲ್ಸಾ' ಎಂದು ಕರೆದರು.



**8** ಸಿಖ್ಖರಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳ ಮೇಲ್ವಿಚಾರಣೆಯನ್ನೂ ಈ 'ಖಾಲ್ಸಾ'ವೇ ನೋಡಿಕೊಳ್ಳಬೇಕು ಎಂದು ಗುರು ಗೋವಿಂದಸಿಂಗರು ಆಜ್ಞೆ ಮಾಡಿದರು. ಖಾಲ್ಸಾ ಸಂಘಟನೆ ವೇಗವಾಗಿ ಬೆಳೆಯಿತು. ಇದರ ಪರಿಣಾಮವಾಗಿ ಗುರುವಿಗೆ ಬಹಳ ಬೇಗ ಒಂದು ದೊಡ್ಡ ಸೇನೆಯನ್ನು ಕಟ್ಟಲು ಸಾಧ್ಯವಾಯಿತು.


ಸೋದರರೆ! ಇನ್ನು ಮುಂದೆ ನಾನು ನಿಮ್ಮ ಗುರು ಅಲ್ಲ, ನಾನೂ ನಿಮ್ಮೊಳಗೆ ಒಬ್ಬ, ನಿಮ್ಮ ಸೇವಕ, ಖಾಲ್ಸಾ ನಿಮ್ಮ ಗುರು. ನಮ್ಮ ಸೇನೆಯಲ್ಲಿ ೮,೦೦೦ ಸೈನಿಕರಿದ್ದಾರೆ, ನಾಲ್ಕು ಕೋಟೆಗಳನ್ನು ಕಟ್ಟಲಾಗಿದೆ. ನೀವು ಯಾರೂ ಹೇಡಿಗಳಲ್ಲ, ನೀವೆಲ್ಲಾ ಸಿಂಹಗಳು. ನೀವು ಐದು 'ಕ'ಗಳನ್ನು ಪಡೆದಿರಬೇಕು– **ಕಿರ್ಪಾನ್** (ಕತ್ತಿ), **ಕಂಕಣ** (ಕಬ್ಬಿಣದ ಬಳೆ), **ಕೇಶ್** (ತಲೆಯಲ್ಲಿ, ಕತ್ತರಿಸದ ಕೂದಲು), **ಕಂಗ** (ಬಾಚಣಿಗೆ), **ಕಚ್ಛ** (ಬಿಗಿಯಾದ ಒಳಬಟ್ಟೆ), ಮತ್ತು ನೀವು ಸಿಂಹಗಳಂತೆ, ವೀರ ಸಿಂಹಗಳಂತೆ ಮೆರೆಯಬೇಕು. ಖಾಲ್ಸಾಕ್ಕೆ ಜಯವಾಗಲಿ!



ಗುರುವಿಗೆ ಜಯವಾಗಲಿ! ಖಾಲ್ಸಾಗೆ ಜಯವಾಗಲಿ!

**9** ಸಿಖ್ಖರ ಬೆಳೆಯುತ್ತಿರುವ ಶಕ್ತಿಯನ್ನು ತಡೆಯಲು ಔರಂಗಜೇಬನು ತನ್ನ ಆಡಳಿತಾಧಿಕಾರಿ ವಜೀರ್‌ಖಾನನನ್ನು ಕಳುಹಿಸಿದನು. ಅವನು ತನ್ನ ಸೈನಿಕರೊಡನೆ ಐದು ತಿಂಗಳ ಕಾಲ ಸಿಖ್ಖರ ಕೋಟೆಯನ್ನು ಸುತ್ತುಕಟ್ಟಿದ್ದನು. ಆಗ ಗುರು ಗೋವಿಂದಸಿಂಗ್ ತಮ್ಮ ತಾಯಿಗೆ ಹೇಳಿದರು:

ಮುತ್ತಿಗೆ ನಿಲ್ಲುವಂತೆ ಕಾಣುತ್ತಿಲ್ಲ. ಮೊಮ್ಮಕ್ಕಳೊಂದಿಗೆ ನೀನು ಇಲ್ಲಿಂದ ತಪ್ಪಿಸಿಕೊಂಡು ಹೋಗುವುದು ಒಳ್ಳೆಯದು.



**10** ಅದರಂತೆ ಗುರುವಿನ ತಾಯಿ ಎರಡು ಮಕ್ಕಳೊಡನೆ ಗುಟ್ಟಾಗಿ ಹೊರಟರು. ದಾರಿಯಲ್ಲಿ ಅವರು ಮೊಘಲ್ ಸೈನಿಕರ ಕೈಗೆ ಸಿಕ್ಕಿಕೊಂಡರು. ಇದನ್ನು ತಿಳಿದ ವಜೀರ್ ಖಾನನು

ಈ ಇಬ್ಬರು ಹುಡುಗರು ಗುರು ಗೋವಿಂದಸಿಂಗನ ಮಕ್ಕಳು.



ಅವರು ಜೀವಂತವಾಗಿರುವಂತೆಯೇ ಅವರನ್ನು ಒಳಸೇರಿಸಿ ಅವರ ಸುತ್ತ ಒಂದು ಗೋಡೆ ಕಟ್ಟಿಬಿಡಿ.

**11** ಗುರು ಗೋವಿಂದಸಿಂಗ್ ಆಗ ಪಾಟಿಯಾಲದಲ್ಲಿ ರಕ್ಷಣೆ ಪಡೆದಿದ್ದರು.

ಗುರುಗಳೆ! ಔರಂಗಜೇಬನು ಸತ್ತ, ಅವನ ಹಿರಿಯ ಮಗ ಬಹಾದೂರ್‌ಶಾ ಕಾಬೂಲಿನಿಂದ ಹಿಂತಿರುಗಿ ಬಂದಿದ್ದಾನೆ. ಅವನಿಗೆ ಪಟ್ಟಕಟ್ಟಿದ್ದಾರೆ.

ನಮ್ಮ ವೀರರ ಬಗ್ಗೆ ನನಗೆ ಬಹಳ ಹೆಮ್ಮೆ, ಅವರು ಎಷ್ಟು ಶಿಸ್ತಿನಿಂದ ನಡೆದುಕೊಳ್ಳುತ್ತಿದ್ದಾರೆ!



**12** ಔರಂಗಜೇಬನ ಕಿರಿಯಮಗ ಅಸ್ರಂ ಆಗ ದಂಗೆ ಎದ್ದ. ಅವನು ಒಂದು ಸೇನೆಯನ್ನು ಮುನ್ನಡೆಸುತ್ತಿದ್ದ. ಆಗ್ರಾದಲ್ಲಿ ಯುದ್ಧ ಆರಂಭ ಆಯಿತು.
ಆಗ ಬಹಾದೂರ್ ಶಾ ಗುರು ಗೋವಿಂದರ ಸಹಾಯವನ್ನು ಬೇಡಿದ, ಅವರೊಡನೆ ಒಂದು ಒಪ್ಪಂದಕ್ಕೆ ಬಂದ. ಆ ಒಪ್ಪಂದದಂತೆ:

೧. ಹಿಂದೂಗಳನ್ನು ಮತಾಂತರಗೊಳಿಸಬಾರದು.
೨. ಖಾಲ್ಸಾ ಸಂಘವು ಮುಸಲ್ಮಾನರೊಡನೆ ಜಗಳವಾಡಬಾರದು, ಸ್ನೇಹದಿಂದ ಇರಬೇಕು.
೩. ಹಿಂದೂಗಳು ಮತ್ತು ಸಿಖ್ಖರು ಯಾವ ತೊಂದರೆಯಿಲ್ಲದೆ ತಮ್ಮ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಬಹುದು.
೪. ಹಿಂದೂಗಳು ಮತ್ತು ಸಿಖ್ಖರು ವಿಶೇಷ ಕಂದಾಯ ಕಟ್ಟಬೇಕಿಲ್ಲ. ಸಿಖ್ಖರಿಗೆ ಕಂದಾಯದಲ್ಲಿ ರಿಯಾಯಿತಿ ನೀಡಬೇಕು.
೫. ಗೋಹತ್ಯೆ ನಿಷೇಧಿಸಬೇಕು.